ನೆಲಮಂಗಳ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಗೋಮಾಳದ ಜಮೀನಿನ ಹಂಚಿಕೆ

779 - ಶ್ರೀ ಅಂಜನಮೂರ್ತಿ, (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಭೂಮಿಯನ್ನು ಅನಧಿಕೃತ ಸಾಗುವಳಿ ಮಾಡುತ್ತಿರುವ ಬಡ ರೈತರು, ಹರಿಜನ-ಗಿರಿಜನರು, ಭೂ ರಹಿತ ರೈತರ ಒಟ್ಟು ಸಂಖ್ಯೆ ಎಷ್ಟು? ಹಾಗೂ ಈ ರೀತಿ ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು?

ಆ) ಈ ಭೂಮಿಗಳನ್ನು ಸಕ್ರಮಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ 191 ಜನರು ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆ, ಹಾಗೂ ಇವರುಗಳು ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣ 2424 ಎಕರೆ 23 ಗುಂಟೆ. ಅನಧಿಕೃತ ಸಾಗುವಳಿ ಮಾಡುತ್ತಿರುವ ಜನಗಳ ವಿವರಣೆಯನ್ನು ಕೆಳಕಂಡಂತೆ ನೀಡಲಾಗಿದೆ:

	ಜನಗಳ ಸಂಖ್ಯೆ	ವಿಸ್ತೀರ್ಣ ಎ-ಗುಂ
1) ಪರಿಶಿಷ್ಟ ಜಾತಿ	584	325-13
2) ಪರಿಶಿಷ್ಟ ಪಂಗಡ	367	295-10
3) ಭೂರಹಿತ ರೈತರು	308	562-00
4) ಬಡ ರೈತರು	652	1242-00
ಒಟ್ಟು	1911	2424-23

ಆ) ರಾಜ್ಯದಲ್ಲಿರುವ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವುದಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ಕ್ಕೆ ಕಲಂ 94 (ಎ) ಅನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯಿದೆ, 1990ರಂತೆ ಸೇರಿಸಲಾಗಿದೆ. ಇಂತಹ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಕಾರ್ಯವಿಧಾನವನ್ನು ಸದ್ಯದಲ್ಲಿಯೇ ಹೊರಡಿಸಲಿರುವ ಮೇಲಿನ ತಿದ್ದುಪಡಿ ಕಾಯಿದೆ ಅನ್ವಯ ತಯಾರಿಸಿರುವ ನಿಯಮಾವಳಿಗಳಿಗೆ ಅನುಸಾರವಾಗಿ ಮಾಡಲಾಗುತ್ತದೆ.

ಮುಲ್ಕಿ ಫಿರ್ಕಾದಲ್ಲಿ ರೈಲ್ವೆ ಲೈನಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವುದರ ಬಗ್ಗೆ

784 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಲ್ಕಿ-ಮೂಡಬಿದ್ರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಫಿರ್ಕಾದಲ್ಲಿ ರೈಲ್ವೆಗಾಗಿ ಎಷ್ಟು ಎಕರೆ ಸ್ಥಳವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ:

ಆ) ಜನರಿಗೆ ಎಷ್ಟು ಪರಿಹಾರ ಪಾವತಿಯಾಗಿದೆ, ಎಷ್ಟು ಬಾಕಿ ಇದೆ, ಇದನ್ನು ಯಾವಾಗ ಪಾವತಿ ಮಾಡಲಾಗುವುದು:

ಇ) ಇಲ್ಲಿಯ ತೋಡು, ತೊರೆಗಳಿಗೆ ರಚಿಸುವ ಸೇತುವೆಗಳು ಚಿಕ್ಕದಾಗಿದ್ದು, ಮಳೆಗಾಲದಲ್ಲಿ ನೆರೆ ನೀರು ನಿಲ್ಲುವ ಭಯವನ್ನು ವ್ಯಕ್ತಪಡಿಸಿ ರೈತರು ಅರ್ಜಿಯನ್ನು ಸಲ್ಲಿಸಿರುವರೆ: